# ಒಪ್ಪುವಂಥ ಲಿಪ್‌ಸ್ಟಿಕ್ ಆಯ್ಕೆ ಹೀಗಿರಲಿ...

■ ಪವಿತ್ರಾ ಭಟ್

ಅದು ಎಂಥದೇ ಸಂದರ್ಭವಿರಲಿ, ಅದೆಷ್ಟೇ ಗಡಿಬಿಡಿಯಿರಲಿ, ಮೇಕಪ್ ಮಾಡದೆ, ಕನ್ನಡಿಯೆದುರು ನಿಲ್ಲದೆ ಮುಂದೆ ಸಾಗುವ ಹೆಣ್ಮಕ್ಕಳ ಸಂಖ್ಯೆ ಭಾರೀ ವಿರಳ. ಹೀಗಾಗಿಯೇ ಮಹಿಳೆಯರಿಗೆ ಕನ್ನಡಿಯೆಂದರೆ ಅಚ್ಚುಮೆಚ್ಚು. ಮೇಕಪ್ ಅಂದ್ರೆ ಪಂಚಪ್ರಾಣ. ಸಭೆ– ಸಮಾರಂಭ, ಕಚೇರಿ, ಕಾಲೇಜಿಗೆ ಹೋಗುವವರಿರಲಿ ಸಣ್ಣ ಪ್ರಮಾಣದಲ್ಲಾದರೂ ಮೇಕಪ್ ಮೊರೆಹೋಗುತ್ತಾರೆ.

ಕಣ್ಣಿನ ಸುತ್ತ ಕಾಡಿಗೆಯ ಅಲಂಕಾರ, ಕೆಂಪೇರಿಸುವ ಕೆನ್ನೆಗಳಿಗೆ ಫೌಂಡೇಶನ್ ಕ್ರೀಮ್–ಪೌಡರ್, ನಕ್ಕಾಗ ಮೊಗ್ಗರಳಿದಂತೆ ಕಾಣುವ ತುಟಿಗಳನ್ನು ರಂಗೇರಿಸಿಕೊಳ್ಳುವುದು ಸಾಮಾನ್ಯ.

ಕನ್ನಡಿಯೆದುರು ನಿಂತು ಮುಖವನ್ನು ನೋಡಿದಾಗ ತುಟಿಗಳ ಕಡೆ ಕೊಂಚ ಹೆಚ್ಚೇ ಗಮನಹೋಗುತ್ತದೆ. ಒಡೆದ, ಸೀಳಿದ ತುಟಿಗಳು ಮುಖದ ಅಂದವನ್ನೇ ಕೆಡಿಸಿಬಿಡುತ್ತವೆ. ಎಷ್ಟೇ ಮೇಕಪ್ ಮಾಡಿದರೂ ತುಟಿ ಅಂದವಾಗಿ ಕಾಣದಿದ್ದರೆ ಮೇಕಪ್ಪೇ ಅಪೂರ್ಣ. ಮುಖದ ಅಂದ ಹೆಚ್ಚಿಸುವಲ್ಲಿ ತುಟಿಯ ರಂಗು ಪ್ರಮುಖ ಪಾತ್ರ ವಹಿಸುತ್ತದೆ. ಮುಖದ ಚರ್ಮಕ್ಕೆ ಹೋಲುವ, ಉಡುಪಿಗೆ ಒಪ್ಪುವ ತುಟಿಯ ರಂಗು ಅಥವಾ ಲಿಪ್‌ಸ್ಟಿಕ್ ಇರಲೇಬೇಕು. ಅದೇ ಭೂಷಣ.

### ಲಿಪ್‌ಸ್ಟಿಕ್ ಆಯ್ಕೆ ಹೇಗೆ?

ಎಲ್ಲರಿಗೂ ಎಲ್ಲಾ ಬಣ್ಣದ ಲಿಪ್‌ಸ್ಟಿಕ್ ಸರಿಹೊಂದುವುದಿಲ್ಲ. ಚರ್ಮದ ವರ್ಣಕ್ಕೆ ತಕ್ಕ ಹಾಗೆ ಲಿಪ್‌ಸ್ಟಿಕ್ ಬಣ್ಣ ಆಯ್ಕೆ ಮಾಡಿಕೊಳ್ಳಬೇಕು. ಕೆಲವೊಮ್ಮೆ ನಮಗಿಷ್ಟದ ಬಣ್ಣ ಎಂದುಕೊಂಡರೆ ಚರ್ಮಕ್ಕೆ ಹೊಂದಿಕೊಳ್ಳದೆ ಮೇಕಪ್ ಅಂದಗೆಡಬಹುದು. ಲಿಪ್‌ಸ್ಟಿಕ್ ಆಯ್ಕೆ ಬಗ್ಗೆ ಹೇಳುವ ಮೇಕಪ್ ಕಲಾವಿದೆ ಆಶಾ ದಿನೇಶ್, ನಮ್ಮ ಮುಂಗೈನ ಮೇಲೆ ಲಿಪ್‌ಸ್ಟಿಕ್‌ನಲ್ಲಿ ಒಂದೊಂದು ಗೆರೆ ಎಳೆದುಕೊಂಡರೆ ನಮ್ಮ ವರ್ಣಕ್ಕೆ ಸರಿ ಹೊಂದುವ ಬಣ್ಣವನ್ನು ಸುಲಭವಾಗಿ ಆಯ್ಕೆ ಮಾಡಿಕೊಳ್ಳಬಹುದು ಎನ್ನುತ್ತಾರೆ.

### ನಿಮಗೆ ತಕ್ಕಂತಿರಲಿ ತುಟಿಯ ರಂಗು...

ನೀವೇನಾದರೂ ಬೆಳ್ಳಗಿದ್ದರೆ ನ್ಯೂಡ್ ಶೇಡ್ ಮತ್ತು ಗಾಢ ಕೆಂಪು, ಗಾಢ ಗುಲಾಬಿ, ಮರೂನ್ ಬಣ್ಣಗಳು ಸರಿಹೊಂದುತ್ತವೆ. ಇವು ಮುಖವನ್ನು ಆಕರ್ಷಕವಾಗಿಯೂ ಕಾಣುವಂತೆ ಮಾಡುತ್ತವೆ. ಗಾಢ ಬಣ್ಣಗಳು ಮುಖದ ಹೊಳಪನ್ನು ಹೆಚ್ಚಿಸುತ್ತವೆ. ಗೋಧಿ ಬಣ್ಣದವರಾಗಿದ್ದರೆ ಮಧ್ಯಮ ಶೇಡ್‌ನ ಲಿಪ್‌ಸ್ಟಿಕ್‌ಗಳು ಚೆನ್ನಾಗಿ ಹೊಂದಿಕೊಳ್ಳುತ್ತವೆ. ವಾರ್ಮ್ ಪಿಂಕ್, ಪೀಚ್ ಕಲರ್, ರೋಸಿ ಪಿಂಕ್ ರೀತಿಯ ಬಣ್ಣಗಳು ಅಂದ ಹೆಚ್ಚಿಸುತ್ತವೆ. ಕಪ್ಪಗಿದ್ದರೆ ನ್ಯೂಡ್ ಶೇಡ್‌ಗಳ ಬದಲಾಗಿ ಡಾರ್ಕ್ ಶೇಡ್‌ಗಳನ್ನು ಆಯ್ಕೆ ಮಾಡಿಕೊಳ್ಳಿ.

### ಟ್ರೆಂಡ್‌ನಲ್ಲಿರುವ ಲಿಪ್‌ಸ್ಟಿಕ್ ಬಣ್ಣಗಳು

ನ್ಯೂಡ್ ಶೇಡ್ಸ್‌ಗಳಲ್ಲಿ– ಕೋರಲ್ ಲೈಟ್, ಗೋಲ್ಡನ್ ಬ್ರೌನ್, ಪೀಚ್, ತಿಳಿ ಗುಲಾಬಿ ಬಣ್ಣದ ಲಿಪ್‌ಸ್ಟಿಕ್‌ಗಳು, ಮೀಡಿಯಮ್ ಶೇಡ್ಸ್‌ಗಳಲ್ಲಿ– ಎಪ್ರಿಕಾರ್ಟ್, ಆರೆಂಜ್ ಪೀಚ್, ರೋಸ್ ಬೆರ್ರಿ, ಬಾಂಬ್ ಶೆಲ್, ಹಾರ್ಟ್ ಬ್ರೇಕರ್ ಬಣ್ಣಗಳ ಲಿಪ್‌ಸ್ಟಿಕ್‌ಗಳು ಹೆಚ್ಚು ಮಾರಾಟವಾಗುತ್ತಿವೆ. ಡಾರ್ಕ್ ಅಥವಾ ಗಾಢ ಬಣ್ಣಗಳಲ್ಲಿ– ಕೆಂಪು, ಬ್ರೌನ್, ಪರ್ಪಲ್, ಗಾಢ ಗುಲಾಬಿ, ಚಾಕೊಲೇಟ್ ಬಣ್ಣದ ಲಿಪ್‌ಸ್ಟಿಕ್‌ಗಳು ಮಾರುಕಟ್ಟೆಯಲ್ಲಿ ಟ್ರೆಂಡ್‌ನಲ್ಲಿವೆ.

### ತುಟಿಗಳ ಬಗ್ಗೆ ಇರಲಿ ಗಮನ

ಲಿಪ್‌ಸ್ಟಿಕ್ ಹಚ್ಚುವಾಗ ಬಣ್ಣಗಳ ಆಯ್ಕೆ ಬಗ್ಗೆ ಎಷ್ಟು ಗಮನಹರಿಸುತ್ತೇವೋ ಅಷ್ಟೇ ನಮ್ಮ ತುಟಿಗಳ ಬಗ್ಗೆಯೂ ನಿಗಾ ಇರಬೇಕು. ಒಣಗಿದ ತುಟಿಗಳನ್ನು ಹೊಂದಿದ್ದರೆ ಗ್ಲಾಸಿ ಅಥವಾ ಮಾಯಿಶ್ಚರೈಸರ್ ಇರುವಂತಹ ಲಿಪ್‌ಸ್ಟಿಕ್ ಬಳಸಬೇಕು. ಮೆತ್ತಗಿನ ತುಟಿ ಹೊಂದಿದ್ದರೆ ಮ್ಯಾಟ್ ಫಿನಿಶಿಂಗ್ ಲಿಪ್‌ಸ್ಟಿಕ್ ಬಳಸಬಹುದು. ಇವೆಲ್ಲದರ ನಡುವೆ ಉತ್ತಮ ಗುಣಮಟ್ಟದ, ಒಳ್ಳೆಯ ಕಂಪನಿಯ ಲಿಪ್‌ಸ್ಟಿಕ್ ಖರೀದಿಸಿ ಬಳಸುವುದನ್ನು ಮರೆಯಬಾರದು. ಇತ್ತೀಚಿನ ದಿನಗಳಲ್ಲಿ ಮಿಕ್ಸ್ ಅಂಡ್ ಮ್ಯಾಚ್ ಲಿಪ್‌ಸ್ಟಿಕ್ ಕೂಡ ಟ್ರೆಂಡ್ ಆಗುತ್ತಿದೆ. ಮದುವೆ ಹೆಣ್ಣಿಗೆ, ವಿಶೇಷ ಸಂದರ್ಭಗಳಲ್ಲಿ ಮೇಕಪ್ ಕಲಾವಿದರು ಎರಡು ಮೂರು ಬಣ್ಣದ ಲಿಪ್‌ಸ್ಟಿಕ್ ಸಂಯೋಜನೆಗೊಳಿಸಿ ತುಟಿಯ ರಂಗನ್ನು ಹೆಚ್ಚಿಸುತ್ತಾರೆ.

### ಡ್ರೆಸ್‌ಗಿರಲಿ ಆದ್ಯತೆ

ಮೇಕಪ್, ಲಿಪ್‌ಸ್ಟಿಕ್‌ಗೆ ತಕ್ಕ ಹಾಗೆ ದಿರಿಸು ಧರಿಸುವುದೂ ಅಷ್ಟೇ ಮುಖ್ಯ ಎನ್ನುತ್ತದೆ ಫ್ಯಾಷನ್ ಪ್ರಪಂಚ. ನಮ್ಮ ದೇಹ ರಚನೆ, ಚರ್ಮದ ಬಣ್ಣಕ್ಕೆ ತಕ್ಕ ಹಾಗೆ ಬಟ್ಟೆ ಧರಿಸಿದರೆ ಪರಿಪೂರ್ಣವಾಗಿ ಕಾಣಬಹುದು.

ಉದಾಹರಣೆಗೆ: ಕಪ್ಪು ಬಣ್ಣದ ಚರ್ಮ ಇರುವವರು ಅವರಿಗೆ ತಕ್ಕ ಹಾಗೆ ಗಾಢ ಕೆಂಪು ಬಣ್ಣದ ಲಿಪ್‌ಸ್ಟಿಕ್ ಆಯ್ಕೆ ಮಾಡಿಕೊಂಡಿರುತ್ತಾರೆ. ಆದರೆ ಗುಲಾಬಿ ಬಣ್ಣದ ಉಡುಗೆ ಧರಿಸಿದರೆ ಒಂದಕ್ಕೊಂದು ಹೊಂದಾಣಿಕೆ ಆಗುವುದಿಲ್ಲ. ಗುಲಾಬಿ ಬಣ್ಣದ ಉಡುಗೆಗೆ ಗಾಢ ಗುಲಾಬಿ ಬಣ್ಣದ ಲಿಪ್‌ಸ್ಟಿಕ್ ಸೂಕ್ತ ಎನ್ನುವುದರ ಅರಿವು ನಮಗಿರಬೇಕು. ■

